**ದಿನಾಂಕಃ 16.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ ಕೆ ವಿ ವಕೀಲರಿಂದಃ-**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಅಷ್ಟಾಗಿ ತಿಳಿದಿಲ್ಲ. ಈ ದಾವೆಯನ್ನು ಯಾವ ಪರಿಹಾರ ಕೋರಿ ಹೂಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು 4 ನೇ ಪ್ರತಿವಾದಿಯ ತೋಟದ ಮೂಲಕ ನಮ್ಮ ಜಮೀನಿಗೆ ಹೋಗಲು ರಸ್ತೆಯನ್ನು ಕೋರಿ ಹೂಡಿರುತ್ತೇವೆ. 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಯಾವುದೇ ಪರಿಹಾರ ಕೋರಿರುವುದಿಲ್ಲ ಎಂದರೆ ಸಾಕ್ಷಿಯು 1 ರಿಂದ 4 ನೇ ಪ್ರತಿವಾದಿಗಳು ಸಹೋದರರಾಗಿದ್ದು ಅವರು ರಸ್ತೆಯನ್ನು ಬಿಡಬೇಕು ಎಂದು ನುಡಿಯುತ್ತಾರೆ. ದಾವಾ ಬಿ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಃ ಪ್ರತಿವಾದಿಗಳ ಸ್ವತ್ತು, ದಕ್ಷಿಣಕ್ಕೆ ಃ ರಂಗಶೆಟ್ಟಿ ರವರ ಜಮೀನು, ಪೂರ್ವಕ್ಕೆ ಃ ಮರಿಸ್ವಾಮಿಶೆಟ್ಟಿ ರವರ ಜಮೀನು, ಪಶ್ಚಿಮಕ್ಕೆ ಃ ಮಲ್ಲಿರಂಗಶೆಟ್ಟಿರವರ ಜಮೀನು, ದಕ್ಷಿಣಕ್ಕೆ ಃ ನಮ್ಮ ಜಮೀನು ಇರುತ್ತದೆ. ದಾವಾ ಎ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಃ ಲಕ್ಕಶೆಟ್ಟಿ ರವರ ಜಮೀನು, ಪಶ್ಚಿಮಕ್ಕೆ ಃ ಮಲ್ಲಿರಂಗಶೆಟ್ಟಿ ರವರ ಜಮೀನು, ದಕ್ಷಿಣಕ್ಕೆ ಃ ಹಳ್ಳ, ಉತ್ತರಕ್ಕೆ ಃ ಪ್ರತಿವಾದಿಗಳ ಸ್ವತ್ತು. 1 ರಿಂದ 3 ನೇ ವಾದಿಗಳು ತಮ್ಮ ಆಸ್ತಿಗಳನ್ನು ವಿಭಾಗಮಾಡಿಕೊಂಡಿದ್ದಾರೆ ಎಂದರೆ ಸರಿ.

ನನ್ನ ತಂದೆ ಹೆಸರು ಲಕ್ಷ್ಮಣಶೆಟ್ಟಿ. 1 ರಿಂದ 4 ನೇ ಪ್ರತಿವಾದಿಗಳು ವಿಭಾಗಮಾಡಿಕೊಂಡಿದ್ದಾರೆ. ನಾನು 4 ನೇ ಪ್ರತಿವಾದಿಯ ಜಮೀನಿನಲ್ಲಿ ದಾರಿ ಹಕ್ಕನ್ನು ಕೋರಿ ದಾವೆ ಹೂಡಿರುತ್ತೇನೆ. ನಾನು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಯಾವುದೇ ಪರಿಹಾರ ಕೋರಿ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತಿನಲ್ಲಿ ಪಾರ್ತೆನಿಯಮ್ ಗಿಡಗಳು ಬೆಳೆದಿವೆ. ಪ್ರತಿವಾದಿಗಳ ಯಾವ ದಿಕ್ಕಿನಲ್ಲಿ ನಮ್ಮ ಆಸ್ತಿ ಇದೆ ಎಂದರೆ ಪಶ್ಚಿಮ ದಿಕ್ಕಿನಲ್ಲಿದೆ. ಸುಮಾರು 30 ವರ್ಷಗಳ ಹಿಂದೆ ದಾರಿ ವಿಚಾರವಾಗಿ ಪ್ರತಿವಾದಿಗಳು ಮತ್ತು ನಮ್ಮ ನಡುವೆ ಮಾತುಕತೆಯಾಗಿ ಪ್ರತಿವಾದಿಗಳು 6 ಅಡಿ ಜಾಗ ದಾರಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ 6 ಅಡಿಗಿಂತ ಹೆಚ್ಚಿನ ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಆಸ್ತಿಯ ಪೂರ್ವ ಹಾಗೂ ಪಶ್ಚಿಮ ದಿಕ್ಕಿನಲ್ಲಿ 6 ಅಡಿ ಜಾಗವನ್ನು ದಾರಿಯಾಗಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 6 ಅಡಿಗಿಂತ ಹೆಚ್ಚಿನ ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಬಿ ಷೆಡ್ಯೂಲ್ ಆಸ್ತಿನಲ್ಲಿ 12 ಅಡಿ ಅಗಲದ ದಾರಿ ಇಲ್ಲಾ ಸದರಿ ಸ್ವತ್ತಿನಲ್ಲಿ 10 ರಿಂದ 15 ವರ್ಷಗಳ ಮರಗಳು ಇವೆ ಎಂದರೆ ಸಾಕ್ಷಿಯು ರಸ್ತೆಯಲ್ಲಿ ತೆಂಗಿನ ಮರ ಹಾಗೂ ಅಡಿಕೆ ಮರಗಳನ್ನು ಬೆಳೆಸಿರುತ್ತಾರೆ ಎಂದು ನುಡಿಯುತ್ತಾರೆ. 15 ವರ್ಷಗಳಿಂದ ಉಳಿದ ರಸ್ತೆಯನ್ನು ಓಡಾಡಲು ಉಪಯೋಗಿಸುತ್ತಿದ್ದೆವು ಎಂದರೆ ಸರಿ. 15 ವರ್ಷಗಳಿಂದ ಉಪಯೋಗಿಸುತ್ತಿದ್ದ ರಸ್ತೆಯು ಈಗಲೂ ಸಹ ಅದೇ ರೀತಿ ಇದೆ ಎಂದರೆ ಸರಿ.

<u>( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.